ದಿನಾಂಕಃ 22.04.2026 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯ್ತು.

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಮತಿ ಎ ಸಿ ವಕೀಲರಿಂದಃ-**

1. ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ವಿಚಾರಗಳ ಬಗ್ಗೆ ನನಗೆ ಗೊತ್ತಿದೆ. ಅದರಲ್ಲಿ ಏನು ಬರೆದಿದೆ ಎಂದರೆ ಸಾಕ್ಷಿ ಮನೆ ನಮಗೆ ಬಿಡಿಸಿಕೊಡಿ ಎಂದು ಬರೆದಿದೆ ಎಂದು ನುಡಿಯುತ್ತಾರೆ. ಆ ರೀತಿ ನಾನೇ ಹೇಳಿ ಬರೆಸಿರುತ್ತೇನೆ. ನನ್ನ ತವರು ಮನೆ ಶಿರಾಳಕೊಪ್ಪ. ನನ್ನ ಗಂಡನ ಮನೆ ಶಿಕಾರಿಪುರ. ನನ್ನ ಮದುವೆ 1985 ರಲ್ಲಿ ಆಗಿರುತ್ತದೆ. ನನಗೆ ಇಬ್ಬರು ಮಕ್ಕಳು. ಅನುಪ್ ನನ್ನ 2 ನೇ ಮಗ. ನಾನು ಜೆರಾಕ್ಸ್ ಅಂಗಡಿ ನಡೆಸುತ್ತೇನೆ. ನನ್ನ ಮಗ ಅನುಪ್ ಸಹ ಅದೇ ಕೆಲಸ ಮಾಡುತ್ತಾನೆ ಎಂದರೆ ಸರಿ.

2. ಪ್ರತಿವಾದಿ ನನ್ನ ಸೊಸೆ ಎಂದರೆ ಸರಿ. ಪ್ರತಿವಾದಿ ಮೂಲತ ಹುಬ್ಬಳಿ ಪಟ್ಟಣಕ್ಕೆ ಸೇರಿದವರು ಎಂದರೆ ಸರಿ. ಪ್ರತಿವಾದಿ ಈಗ ನಮ್ಮ ಮನೆಯಲ್ಲಿಯೇ ವಾಸ ಇದ್ದಾರೆ ಎಂದರೆ ಸರಿ. ನನ್ನ ಮಗ ಪ್ರತಿವಾದಿಯನ್ನು ದಿನಾಂಕಃ 27.12.2013 ರಲ್ಲಿ ಮದುವೆಯಾಗಿದ್ದಾರೆ ಎಂದರೆ ಸರಿ. ನನ್ನ ಗಂಡ ಈಗ ಜೀವಂತ ಇದ್ದಾರೆ. ನಮ್ಮ ಸಮಕ್ಷಮದಲ್ಲಿ ನನ್ನ ಮಗನ ಮದುವೆಯಾಗಿದೆ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದಾರೆ, ನೀಡಲಾಗಿದೆ)

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.**

**ಓ ಹೇ ಕೇ ಸ ಇದೆ.**

**ಹಿರಿಯ ವ್ಯವಹಾರ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಶಿಕಾರಿಪುರ.**